ಳಿಸಲು ಪ್ರಯತ್ನಿಸಿದರೆ ಕೆ.ಇ.ಬಿ. ಆಫೀಸಿನಲ್ಲಿರುವ ಟೆಲಿಫೋನ್ ರಿಸೀವರ್‌ನ್ನು ಎತ್ತಿಟ್ಟಿರುತ್ತಾರೆ. ತಿಯಾರದೇ ದೂರನ್ನು ಈ ಅಧಿಕಾರಿ ಕಿವಿ ಮೇಲೆ ಹಾಕಿಕೊಳ್ಳುವುದಿಲ್ಲ. ೩ ವರ್ಷಗಳ ಹಿಂದೊಮ್ಮೆ ನಾನು ಈ ಅಧಿಕಾರಿಯ ಕೆಲಸಕಾರ್ಯಗಳ ಬಗ್ಗೆ ವಿಧಾನಸಭೆಯಲ್ಲಿ ಮಾತನಾಡಿದ್ದೆ. ಆಗ ಸೂಕ್ತ ಕ್ರಮ ಕೈಗೊಳ್ಳುವ ಭರವಸೆ ನೀಡಲಾಗಿತ್ತು. ಕೊಟ್ಟ ಭರವಸೆ ವಿಧಾನಸೌದ ಬಿಟ್ಟು ಹೊರಗೆ ಹೋಗಿಲ್ಲ. ತೊಂದರೆ ಏಕೆಂದು ಕೇಳಿದರೆ ಮೆಟೀರಿಯಲ್ಸ್ ಇಲ್ಲ, ಸಿಬ್ಬಂದಿಗಳ ಕೊರತೆ ಇದೆ ಎನ್ನುತ್ತಾರೆ. ಅದು ನಿಜವಾದಲ್ಲಿ ಸರಕಾರ ತಕ್ಷಣ ಅವುಗಳನ್ನು ಪೂರೈಸುವ ವ್ಯವಸ್ಥೆ ಮಾಡಬೇಕು.

ಹೊನ್ನಾವರ ತಾಲ್ಲೂಕಿನ ಎಲ್ಲಾ ಮಂಡಲ ಪಂಚಾಯಿತಿಗಳ ಪ್ರಧಾನರು, ಜಿಲ್ಲಾ ಪರಿಷತ್ ಸದಸ್ಯರೂ ಸೇರಿ, ಈ ಅಧಿಕಾರಿಯನ್ನು ಹಾಗೂ ಐದು ವರ್ಷಕ್ಕಿಂತ ಹೆಚ್ಚಿಗೆ ಸೇವೆ ಸಲ್ಲಿಸಿದ ಸಿಬ್ಬಂದಿಗಳನ್ನು ತಕ್ಷಣ ವರ್ಗಾಯಿಸುವ ಕ್ರಮ ಕೈಗೊಳ್ಳಬೇಕೆಂದು ಠರಾವು ಮಾಡಿ ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿದ್ದಾರೆ.

ಹೊನ್ನಾವರ ತಾಲ್ಲೂಕಿನಲ್ಲಿ ವಿದ್ಯುತ್ ಸಂಪರ್ಕ ನಿರ್ವಹಣೆ ತೀರಾ ಕೆಳಮಟ್ಟದಲ್ಲಿರುವುದರಿಂದ (ಕೆಳಪೆ ಮಟ್ಟದಲ್ಲಿರುವುದರಿಂದ) ಯಾವುದಾದರೂ ಹಿರಿಯ ಅಧಿಕಾರಿಗಳಿಂದ ತನಿಖೆ ನೆಡೆಯಿಸಿ ಕೆಲಸದಲ್ಲಿ ಸುಧಾರಣೆ ಮಾಡುವ ಸಲಹೆಗಳನ್ನು ಪಡೆದು ಹೊನ್ನಾವರ ತಾಲ್ಲೂಕಿನ ಜನರನ್ನು ಈ ಅಧಿಕಾರಿಯ ಕರಾಳ ಬಾಹುಗಳಿಂದ ತಪ್ಪಿಸಬೇಕೆನ್ನುವುದರ ಬಗ್ಗೆ ಸರಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಅಧ್ಯಕ್ಷರೇ, ಆ ಸಬ್ ಡಿವಿಜನ್‌ನಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ದಿನಾಂಕ ೧-೬-೮೩ರಿಂದ ಕೆಲಸ ಮಾಡುತ್ತಿದ್ದಾರೆ. ಅವರ ಹೆಸರು ಶ್ರೀಧರ್‌ಶೆಣೈ ಎಂದು. ಇವರ ಬಗ್ಗೆ ಇಲಾಖೆಗಾಗಲೀ ಅಥವಾ ನನಗಾಗಲೀ ಮಾನ್ಯ ನಾಯಕ್‌ರವರು ಕೊಟ್ಟಿರ ತಕ್ಕಂಥ ದೂರನ್ನು ಬಿಟ್ಟರೆ ಬೇರೆ ಯಾರ ದೂರು ಬಂದಿಲ್ಲ ಅದನ್ನು ಅವರು ಹೇಳಿದ್ದಾರೆ, ಹಿರಿಯ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ವಿಚಾರಿಸಬೇಕು ಎಂದು ಹೇಳಿದ್ದಾರೆ. ನಾನು ಈಗಾಗಲೇ ಹುಬ್ಬಳ್ಳಿಯ ಮುಖ್ಯ ಅಭಿಯಂತರರನ್ನು ಕಳುಹಿಸಿ ಅಲ್ಲಿನ ಪರಿಸ್ಥಿತಿಯನ್ನು ಸಂಪೂರ್ಣವಾಗಿ ತಿಳಿದು ಕೊಂಡು ಅಲ್ಲಿ ಏನಾದರೂ ತೊಂದರೆ ಇದ್ದರೆ ಅಲ್ಲಿನ ವ್ಯವಸ್ಥೆ ಸರಿ ಮಾಡತಕ್ಕಂಥದು ಮತ್ತು ಎಲೆಕ್ಟ್ರಿಕ್ ಸಪ್ಲೈಯಲ್ಲಿ ಏನಾದರೂ ತೊಂದರೆ ಇದ್ದರೆ ಅದನ್ನು ತಕ್ಷಣ ನಿವಾರಣೆ ಮಾಡುತ್ತೇವೆಂದು ಹೇಳಿ ಭರವಸೆ ಕೊಡುತ್ತೇನೆ.

(೧೨) ಖಾಸಗಿ ಮೆಡಿಕಲ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸರ್ಕಾರಿ ಸೀಟುಗಳನ್ನು ಪಡೆದವರಿಂದ ದುಬಾರಿ ಫೀಯಂನ್ನು ವಸೂಲು ಮಾಡಲಾಗುತ್ತಿರುವುದು

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೇ, ಮೆಡಿಕಲ್ ಕಾಲೇಜು ಇಂಜಿನಿಯರಿಂಗ್ ಕಾಲೇಜುಗಳು ಸರ್ಕಾರಿ ಸೀಟುಗಳನ್ನು ಖಾಸಗಿ ಮೆಡಿಕಲ್ ಕಾಲೇಜು ಇಂಜಿನಿಯರಿಂಗ್ ಕಾಲೇಜುಗಳಿಗೆ ಅಲಾಟ್ ಮಾಡಿದ್ದಾರೆ. ಸರ್ಕಾರಿ ಕಾಲೇಜುಗಳಲ್ಲಿ ನ್ಯಾಯಯುತ ಫೀಜು ಸರ್ಕಾರಿ ಸೀಟು ಪಡೆದಿರುವ ವಿದ್ಯಾರ್ಥಿಗಳಿಗೆ ಅನ್ವಯಿಸಬೇಕು. ಆದರೆ ಖಾಸಗಿ ಕಾಲೇಜುಗಳು ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗೆ ೧೪೦೦೦-೦೦ ರೂಪಾಯಿಗಳ ಫೀಜು ಸರ್ಕಾರಿ ಕಾಲೇಜಿನಲ್ಲಿ ಸುಮಾರು ೬೦೦ ರೂಪಾಯಿಯನ್ನು ಕೊಡಬೇಕು. ಅದೇ ರೀತಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕೂಡ ದುಬಾರಿ ಫೀಜನ್ನು ವಸೂಲು ಮಾಡುತ್ತಿರುವ ನೀತಿಯನ್ನು ಸರ್ಕಾರ ನಿಯಂತ್ರಿಸದಿರುವುದು ತುಂಬಾ ಅನ್ಯಾಯ ಈ ಶೋಷಣೆ ಬಗ್ಗೆ ಉನ್ನತ ಶಿಕ್ಷಣ ಸಚಿವರು ಈ ಬಗ್ಗೆ ಸದನಕ್ಕೆ ಮಾಹಿತಿಯನ್ನು ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಂ.ರಘುಪತಿ.—ಮಂತ್ರಿಗಳು ಆ ಸದನದಲ್ಲಿದ್ದಾರೆ. ಅವರಿಂದ ನಾಳೆ ಒಂದು ಉತ್ತರವನ್ನು ಕೊಡಿಸುವುದಕ್ಕೆ ಏರ್ಪಾಡು ಮಾಡುತ್ತೇನೆ.

ಛೇರ್ಮನ್.—ನಾಳೆ ತರಿಸಿಕೊಡುತ್ತೇನೆ ಎಂದು ಹೇಳಿದ್ದಾರೆ.